Regd. No M. 1299 SATYAVADI Founded 1917

# ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 254 | ಶುಕ್ರವಾರ 6–6–47 | ಬಿಡಿ ಪ್ರತಿ 3 ಪೈ

## ಬ್ರಿಟಿಷ್ ಮಂತ್ರಿಮಂಡಲ ಸದಸ್ಯರಿಗೆ ಶೆ ಕಾಗದದಲ್ಲಿ ಬಾಂಬು

### ಮೂರನೇ ಯುದ್ಧದ ಭೀತಿ

#### ಟರ್ಕಿಯ ಮುಂಜಾಗ್ರತೆ

ಅಂಕಾರಾ — ಇಸ್ತಾಂಬೂಲ ಹಾಗೂ ಟರ್ಕಿಯ ಯೂರೋಪಿಯ್ ಪ್ರಾಂತಗಳಲ್ಲಿ ಕಳೆದ 1940 ರಿಂದ ಜಾರಿಯಲ್ಲಿದ್ದ ಗಂಡಾಂತರದ ಪರಿಸ್ಥಿತಿಯ ಅವಧಿಯನ್ನು ಈಗ ಪುನಃ ಬೆಳೆಯಿಸುವಂತೆ ಅಸ್ಪಣೆ ಕೊಡಬೇಕೆಂದು ಪಾರ್ಲಿಮೆಂಟಿನಲ್ಲಿ ಬೇಡಿಕೊಂಡ ನೇರಗೆ ಪಾರ್ಲಿಮೆಂಟು ಅದನ್ನು ಒಪ್ಪಿಕೊಂಡಿತು.

ಪರದೇಶದವರು ಟರ್ಕಿಯಲ್ಲಿ ದಾಳೀ ಕೇಂದ್ರ ಕೇಳಿದ್ದೇ ಈತರಹ ಮುಂಜಾಗ್ರತೆ ತೆಗೆದು ಕೊಳ್ಳುವದಕ್ಕೆ ಕಾರಣವಾಯಿತೆಂದು ಹೇಳಲಾಗಿದೆ.

### ಉಪನ್ಯಾಸ

ಸಿಟಿ ಕೋ ಅಪರೇಟಿವ್ ಈ ಬ್ಯಾಂಕಿನ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ತಾ|| 9–6–47 ನೇ ಸೋಮವಾರ ಸಾಯಂಕಾಲ 6 ಗಂಟೆಗೆ ಸರಿಯಾಗಿ ಬ್ಯಾಂಕು ಹಾಲಿನಲ್ಲಿ ಸಂಸ್ಕೃತ ಪಾಠಶಾಲಾ ರಿಟೈರ್ಡ್ ಪ್ರಿನ್ಸಿಪಾಲರಾದ ಮ|| ವೈ. ಚಂದ್ರಶೇಖರಶಾಸ್ತ್ರಿ ಎಂ. ಎ ಯವರು 'ಸಹಕಾರ ತತ್ವದ ರೀತಿಯಲ್ಲಿ ಸಮಾಜಿಕ ರಚನೆ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

### ಸಿನಿಮಾ ಪ್ರೊಡ್ಯೂಸರ ಮೇಲೆ ಮೊಖದ್ದಮೆ

ಬೊಂಬಾಯಿ— 'ಕೀರ್ತಿ ಪಿಕ್ಚರ್ಸಿನ ಪ್ರೊಪ್ರೈಟರೂ, ಡೈರೆಕ್ಟರೂ, ಪ್ರೊಡ್ಯೂಸರೂ ಆದ ಶ್ರೀ ಪ್ರಾಣಲಾಲ್ ಭಗವಾನಜೀ ಆವೇರಿಯೆಂಬವರು ಶಾಂತಿ ದೇವಿಯೆಂಬ ಸಿನಿಮಾ ತಾರೆಯ ಎಡಗೈ ಮುರಿತ್ತು ಮುಖವನ್ನು ವಸ್ತ್ರ ಬಾಯಿಯಿಂದ ಸಿಡಿದು ಸಣ್ಣಗಾಯಗೊಳಿಸಿದ್ದರಿಂದ ಅತನ ಮೇಲೆ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಮೊಖದ್ದಮೆಯಾಗಿದೆ.

### ಶ್ರೀರಂಗಪಟ್ಟಣ

ಸ್ವಂ. ಸು ] ಜೂಈ 5

ಈ ಊರಿನಲ್ಲಿರುವ ಬಸ್ಸು ನಿಲ್ದಾಣದಲ್ಲಿ ಪ್ರಯಾಣಿಕರುಗಳು ಕುಳಿತು ಕೊಳ್ಳುವದಕ್ಕೆ ಮಾರ್ಗವೆ ಇಲ್ಲದೆ ಇರುವುದು, ಅಲ್ಲದೆ ಹುಡಿಯುವುದಕ್ಕೆ ನೀರು ಮತ್ತು ಕುಳಿತು ಕೊಳ್ಳಲು ನೆರಳು ಸಹ ಇರುವುದಿಲ್ಲವಾದ್ದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿರುತ್ತೆ ಇದಕ್ಕೆ ಸಂಬಂದಪಟ್ಟ ಮುನಿಸಿಪಾಲಿಟಿಯವರು ಕೂಡಲೇ ಇದಕ್ಕೆ ನಿಗಾ ಕೊಟ್ಟು ಜದಗಳಿಗೆ ತೊಂದರೆಯನ್ನು ನಿವಾರಿಸುವರೆಂದು ಕೋರುತ್ತೆನೆ.

### ನಿಖಿಲ ಭಾರತ ಆಯುರ್ವೇದ ಮಂಡಲಿ

ಸ್ಥಾಯೀ ಸಮಿತಿಯು 2 ನೇ ಅಧಿವೇಶನವು ಮಣಿಪಾಲಿನಲ್ಲಿ 8–6–47 ನೇ ಭಾನುವಾರ ಬೆಳಿಗ್ಗೆ ಸಡೆಯುವುದೆಂದು ಕಾರ್ಯದರ್ಶಿ ಶ್ರೀ ಕೆ ಪಿ ಪುರಾಣೀಕರು ತಿಳಿಸಿರುತ್ತಾರೆ.

## ವರ್ತಮಾನ

ಈ ದಿವಸ ಅಂ
ಲೈಸ್ಟೈಲ್ ಆಡಳಿತ
ಬ್ರಿಟಿಷ್ ಮಂತ್ರಿಗಳು
ತಾಧಿಕಾರಿಗಳಿಗೆ ಬಂದ
ಗಳಲ್ಲಿ ಬಾಂಬುಗಳಿದ್ದವು.
ಸ್ಫೋಟವಾಗದಿದ್ದರೂ
ಯಾರ್ಡಿನವರು ಇವು
ಎಂದು ಅಭಿಪ್ರಾಯ

o

— ವಿಭಜನೆಯು ಪ್ರಥ
ಗೆ, ವೈಸರಾಯರು 7 ನೆಂ
ಮುಖಂಡರೊಡನೆ ಸಮ್ಮೇ
ಈ ಬಗ್ಗೆ ಒಂದು ಸಣ್ಣ ಸ
ರ್ಸಲು ಚರ್ಚಿಸಲಾಯಿ
ನು ಬಂದಿದೆ.

o

ಲಂ ಜೂಈ 5 — ಪ್ಯಾಲಿ
ಶಾಂತತೆಗೆ ಧಕ್ಕೆಯಾಗಿ ರೈ
ಬಿಳಿಸುವಿಕೆ ಪ್ರಾರಂಭವಾ

o

ಜೂಈ 4 — ಲೀಗ್
ಮಂಡಲಿಯು ಬ್ರಿಟಿಷ್
ಗ್ರಹದ ವಿಷಯ ಚರ್ಚೆ

o

ಜೂಈ 4 — ಸುಮಾರು
ಮುಸ್ಲಿಂ ಸ್ತ್ರೀಯರು
ನೆಗಳನ್ನು ಸಾರಾತ್ತಾ
ಹೋಗಿ ಅಪರನ್ನು ಅಭಿ

o

ಜೂಈ 4 — ಭಾರತವನ್ನು
ರ್ಗಗಳು ಅಭಿನಂದಿಸಿ ಸ್ವಾ

o

ರ್' ಜೂಈ 4 —. ಹಜಾ
ಮೂರದಲ್ಲೊಂದು ಭಾಗ
ುತದಿಂದ ಸುಟ್ಟು ಬೂದಿ
30 ರೂ ಲಕ್ಷ ನಷ್ಟ —
ುನಲ್ಲಿ ಕಲ್ಕತ್ತಾದಲ್ಲಿ ಒಂ
ೋ ಇರಿತವು ನಡೆದಿವೆ — ಹೇ
ದ ಒಂದು ಹಳ್ಳಿಯ ಮೇಲೆ ಸಶಸ್ತ್ರ
ಳಿ ನಡೆದಿದೆ.

o o

ಇಂಡಿಯಾನಾದ ಒಬ್ಬ ರೈತ. 103
ರ್ಷ ವಯಸ್ಸು ಅಷ್ಟೇ ವರ್ಷದ ವನು
ಸ್ತಿದರೆ ವಿವಾಹ ಮಾಡಿಕೊಳ್ಳುವ
ಂತೆ.

ಪ್ರ. ಪ್ರ. ಸಭೆ ಬೆಂ, ಜೂಈ ೫

( ಸ್ವಂತ ವಿಶೇಷ ಪ್ರತಿನಿಧಿಯಿಂದ )

### ಮೈಸೂರು ಸಂಸ್ಥಾನ ಹಿಂದೂ ರಾಜ್ಯವೆಂಬುದು ಖಂಡಿತ

## ಹಿಂದೂಗಳು ಹೇಡಿಗೂಂಡಾಗಳೇ ?

### ಅಸೆಂಬ್ಲಿಯಲ್ಲಿ ಕಲಕಿದ ವಾತಾವರಣ

[ ನಾಳೇ ಸಂಚಿಕೆ ನೋಡಿ ]

— —

### ಬಜೆಟ್ ಭಾಷಣ

ಜೂಈ 4

ಶ್ರೀ ಎಫ್.ಸಿ. ದೇವರಾಜ ಅರಸ್— ನನ್ನ ಪ್ರಥಮ ಕರ್ತವ್ಯ ರಾಜ ಭಕ್ತಿ ಸಮರ್ಪಣೆ ಈ ವರ್ಷದ ಆಯವ್ಯಯ ಪಟ್ಟಿ ಮೇಧಾವಿಗಳಿಂದ ಶಿಲ್ಪಾರಿಸಲ್ಪಟ್ಟಿರುವುದರಿಂದ ಆ ವಿಷಯದಲ್ಲಿ ನಾವು ಹೇಳಬೇಕಾದುದೇನು. ಲೆಖ್ಖ ಶಾಖೆಯ ಬಗ್ಗೆ ಮಾತ್ರ ಸೂಕ್ಷ್ಮ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕು. ವಿದ್ಯಾಭ್ಯಾಸ ಹೆಚ್ಚು ಮುಂದುವರಿಯ ಬೇಕು. ಆರೋಗ್ಯ ಶಾಖೆಯ ಬಗ್ಗೆ ಇನ್ನೂ ಹೆಚ್ಚು ಗಮನ ಕೊಟ್ಟು ಅಭಿವೃದ್ಧಿ ಮಾಡಬೇಕು. ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದ ಬಗ್ಗೆ ಅಧಿಕ ಗಮನೀಯವೀಯಬೇಕು. ಪ್ರತಿಯೊಬ್ಬ ಕೂಲಿಯವನೂ ಕಡ್ಡಾಯ ವಿನೆ ಮಾಡಬೇಕು ಎಂಬ ಅಜ್ಞೆ ಜಾರಿಯಾಗಬೇಕು. ಗೃಹ ಸಮಸ್ಯೆಯನ್ನು ಸರ್ಕಾರವು ಖಂಡಿತ ತೀರ್ಮಾನ ಮಾಡಬೇಕು. ವ್ಯವಸಾಯ ಶಾಖೆಯಲ್ಲಿ ಖಂಡಿತಾ ಪ್ರಚಾರ ನಡೆಯಬೇಕು. ಯುದ್ಧಾನಂತರ ಪುನರ್ರಚನೆ ಬಗ್ಗೆ ಪ್ರತ್ಯೇಕ ಪಕ್ಷರಹಿತ ಮಂತ್ರಿಯೊಬ್ಬ ನೇಮಕವಾಗಬೇಕು.

ಶ್ರೀ ಲಕ್ಷ್ಮೀದೇವಿ ರಾಮಣ್ಣ

ಸ್ತ್ರೀ ವಿದ್ಯಾಭ್ಯಾಸ ಈಗ ಸಾಕಷ್ಟು ಸೌಲಭ್ಯದಿಂದ ಕೂಡಿಲ್ಲ. ಸ್ತ್ರೀ ವಿದ್ಯಾಭ್ಯಾಸಕ್ಕೆ ಸರ್ಕಾರ ಅನಾದಾರಣೆ ತೋರಿಸುತ್ತಿದೆ. ಹರಿಜನೋದ್ಧಾರಕ್ಕಾಗಿ 5 ಲಕ್ಷ ರೂ. ನಿಂದ 10 ಲಕ್ಷ ರೂ. ಗೆ ಏರಿಸಿರುವುದು ಅಭಿನಂದನೀಯವಾದದ್ದು

ಜಾ|| ಬಾಸಿತ್ ಖಾನ್

ಸರ್ಕಾರದ ಆಯವ್ಯಯ ಅಂದಾಜು ಸರ್ವತೋಮುಖವಾಗಿ ಅಭಿನಂದನಾರ್ಹವಾಗಿದೆ. ನನ್ನ ಕೋಮಿಗೆ ಶೇ 50 ಸೇನೆಯಲ್ಲಿಯೂ ಮತ್ತು ಪೋಲೀಸಿನಲ್ಲಿಯೂ ಸ್ಥಾನಬೇಕು, ಶೇ 13-1/3 ರಷ್ಟು ಸಿವಿಲ್ ಸರ್ವಿಸ್ ಸ್ಥಾನ ಕೊಡಬೇಕು.

## ವಿನಂತಿ

ಮದ್ರಾಸ್ ಸರಕಾರದಿಂದ ತರಲ್ಪ ಟ್ಟ ದೇವಾಲಯ ಪ್ರವೇಶ ಕಾನೂನನ್ನು ವಿರೋಧಿಸಲು ಕೂಡತೇ ಎಲ್ಲಾ ಅಸ್ಪೃಶ್ಯರೂ ಕೆಳಗಿನಂತೆ ಬರೆದು ತಮ್ಮ ರುಜು ಹಾಕಿ, ತ್ರೀಮತ್ ಗುರುರಾಜಾ ಚಾರ್ಯ ಮಂತ್ರಾಲಯ ಬಳ್ಳಾರಿ ಜಿಲ್ಲಾ ಈ ವಿಳಾಸಕ್ಕೆ ಕಳಿಸಬೇಕು. ಬರೆಯುವ ರೀತಿ — ' ಮದ್ರಾಸ್ ಮಂತ್ರಿ ಮಂಡಳವು ನೂತನವಾಗಿ ಪಾಸುಮಾಡಿರುವ (47) ಹರಿಜನ ದೇವಾಲಯ ಪ್ರವೇಶ ಮಸೂದೆಯು ಹಿಂದೂ ಧರ್ಮ ವಿರುದ್ಧವಿರುವುದರಿಂದಲೂ, ಇದರಿಂದ ತಿರುಪತಿ ಮುಂತಾದ ದೇವಾಲಯಗಳ ಪಾವಿತ್ರ್ಯಕ್ಕೆ ಭಂಗಬರುವುದರಿಂದಲೂ ಹಿಂದೂ ಧರ್ಮಾಭಿಮಾನಿಗಳೂ ಭಕ್ತರೂ ಆದ ನಾವು ಪ್ರವೇಶ ಕಾನೂನನ್ನು ತೀವ್ರವಾಗಿ ವಿರೋಧಿಸುತ್ತೇವೆ ಮತ್ತು ಅದನ್ನು ಕೂಡ್ಲೆ ವಾಪಸು ತೆಗೆದು ಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇವೆ. ರುಜು.....

## ವಿಾಟಂಗು

ಮೈಸೂರು ಡಿಸ್ಪೆನ್ಸರಿ ಬೋರ್ಡು ವಿಾಟಂಗನ್ನು 1947 ನೇ ಇಸವಿ ಜೂನ್ ಮಾಹೆ 16 ನೇ ತಾರೀಖು ಸೋಮವಾರದಿವಸ ಮಧ್ಯಾಹ್ನ 1 ಘಂಟೆಗೆ ಡಿಸ್ಪೆನ್ಸರಿ ಬೋರ್ಡು ಆಫೀಸು ಕಟ್ಟಡದಲ್ಲಿ ನಡೆಸಲು ಏರ್ಪಾಡು ಮಾಡಿರುತ್ತೆ.

## ಹಸಿದ ಹುಡುಗನನ್ನು ಮರಕ್ಕೆ ಕಟ್ಟಲಾಗಿತ್ತು

ಕಿಂಗ್‌ಪುಡ್ (ವರ್ಜಿನಿಯಾ) ಕಾ 26 — ಹಸಿವಿನಿಂದ ಬಳಲಿದ ಹಾಗೂ ಕೊಳಕಾದ ಬಟ್ಟೆ ಧರಿಸಿದ 3 ವರ್ಷದ ಹುಡುಗನನ್ನು ಸಮಿಾಪದ ಕಾಡಿನ ಒಂದು ಮರಕ್ಕೆ ಕಟ್ಟಲಾಗಿತ್ತೆಂದು ಡಿಪ್ಯೂಟಿ ಶೀಫ್ ಕಿಸ್ಟರು ಹೇಳಿದರು. ಈ ರೀತಿ ಕಟ್ಟುಹಾಕಲು ಅವನು ಓಡಿ ಹೋಗುವನೆಂಬ ಅಂಜಿಕೆಯೇ ಕಾರಣ ವಿತ್ತಂತೆ.

## ಹರಾಜು ನೋಟೀಸು

1947 ನೇ ಇಸವಿ ಜೂನ್ ಮಾಹೆ 21 ನೇ ಮತ್ತು 22 ನೇ ತಾರೀಖುಗಳಲ್ಲಿ ಅರಮನೆ ಗ್ಯಾರೇಜಿನಲ್ಲಿ ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ಒಳ್ಳೆಯ ಸ್ಥಿತಿಯಲ್ಲಿರುವ ಅನೇಕ ಮೋಟಾರು ಕಾರುಗಳೂ, ಬಸ್ಸುಗಳೂ ಮತ್ತು ಲಾರಿಗಳೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ವಿವರಗಳಿಗೆ ತಾಯಿನಾಡು ಮತ್ತು ಜನವಾಣಿಯಲ್ಲಿ 1947 ನೇ ಜೂನ್ 7 ಮತ್ತು 14 ನೇ ತಾರೀಖು ಪ್ರಕಟವಾಗುವ ಜಾಹಿರಾತನ್ನು ದಯವಿಟ್ಟು ನೋಡಿ.

ಸೂಪರಿಂಟೆಂಡೆಂಟ್
ಪ್ಯಾಲೇಸ್ ಗ್ಯಾರೇಜ್
ಮೈಸೂರು.

OFFICE OF THE PRESIDENT
CITY MUNICIPAL COUNCIL
MYSORE, Dated 3–6–46

# Notification

Applications are invited for the post of a clock winder for the maintenance of the Tower & Office Clocks of the City Municipality, Mysore. Only those who are specialists in this field need apply with copies of Testimonials etc. on or before 15 th June 1947, stating the minimum remuneration expected.

K. G. KATWEY
**For President**

Edited, Printed and Published by M. S Krishna Rao at the Satyvadi Press Chamaraj Agrahar, Mysore.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆಧಾನೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪಂಸ್ಥಳಕ್ಕೆ ಅಂಚೆವೆಚ್ಚಸೇರಿ 1–12–0

ಮಹಾಜನರ ಕೋರಿಕೆಯಂತೆ ಪ್ರತಿದಿನ ೩-೩೦ ಕ್ಕೆ ವ

.... ವುಡ್‌ಲ್ಯಾಂಡ್ಸ್ ಮೈಸೂರು ..

ತಾ|| 1-6-47 ರಿಂದ ಕಿಕ್ಕಿರಿದ 5 ನೇ ವಾರ

ನಾವು ಇಬ್ಬರು

(ತಮಿ

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂ
* ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕ

At Oper

8 ನೇ ವಾರ

ಟಿ. ಎಸ್. ಬಾಲಯ್ಯ
ತಪಸಮಣಿದೇವಿ, ವಾಲ
ರಾಮುಚಂದ್ರ ನಟಿಸಿರು

ರಾ ಜ ಕು ಮಾ

(ತಮಿಳು)

ಆಹಾರ ಮಂತ್ರಿ ಖುದ್ದಾಗಿ ಪರಿಶೀಲಿಸುತ್ತಿರುವದು